ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: **122/2023**

ಪಿಡಬ್ಲ್ಯೂ- **5**
ಸಿಡಬ್ಲ್ಯೂ- **6**

ಸಾಕ್ಷಿಗೆ ದಿನಾಂಕ **02-04-2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಃ ರಮೇಶ್ |
| ತಂದೆಯ ಹೆಸರು | ಃ ಸೂರ್ಯ ನಾಯ್ಕ |
| ವಯಸ್ಸು | ಃ 32 ವರ್ಷ |
| ಉದ್ಯೋಗ | ಃ ಪೊಲೀಸ್ ಪೇದೆ , ಹೊಸದುರ್ಗ ಪೊಲೀಸ್ ಠಾಣೆ |
| ವಾಸಸ್ಥಳ | ಃ ಹೊಸದುರ್ಗ |

ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ

ನಾನು 2019 ರಿಂದ ಇಲ್ಲಿಯ ವರೆಗೆ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 02-09-2022 ರಂದು ಸಂಜೆ 4-45 ಗಂಟೆಗೆ ಚಾಸಾ-1 ರವರು ಠಾಣೆಯಲ್ಲಿ ಇದ್ದಾಗ ಬಾತ್ಮೀದಾರರಿಂದ ಹೊಸದುರ್ಗ ತಾಲ್ಲೂಕು ಹಾಲೂ ರಾಮೇಶ್ವರ ಗ್ರಾಮದ ಬಳಿ ಇರುವ ಚಿಲ್ಲರೆ ಅಂಗಡಿಯಲ್ಲಿ ಮಹಂತೇಶ ತಂದೆ ರಂಗಪ್ಪ ಎಂಬುವರು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದ ಮೇರೆಗೆ ಜ್ಞಾಪನವನ್ನು ತಯಾರಿಸಿ ದೂರನ್ನು ತಯಾರು ಮಾಡಿ ಚಾ.ಸಾ-9 ರವರಿಗೆ ನೀಡಿರುತ್ತಾರೆ. ನಂತರ ಠಾಣಾ ಸಿಬ್ಬಂದಿಗಳಾದ ನಾನು ಮತ್ತು ಚಾ.ಸಾ-5 ರವರೊಡನೆ, ಚಾ.ಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಠಾಣೆಗೆ ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿ ಅವರು ಒಪ್ಪಿ ನಮ್ಮೊಂದಿಗೆ ಬಂದಿರುತ್ತಾರೆ.

ನಂತರ ನಾವುಗಳು , ಚಾಸಾ 1 ಮತ್ತು ಪಂಚರೊಡನೆ ಇಲಾಖಾ ಜೀಪಿನಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಸಂಜೆ 5-00 ಗಂಟೆಗೆ ಠಾಣೆಯಿಂದ ಹೊರಟು ಮಾಹಿತಿ ಬಂದ ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು ಪರಿಶೀಲಿಸಿದಾಗ ಒಬ್ಬ ವ್ಯಕ್ತಿ ತನ್ನ ಚಿಲ್ಲರೆ

ಅಂಗಡಿಯ ಮುಂದಿನ ಸಾರ್ವಜನಿಕ ರಸ್ತೆಯಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಪೌಚ್ ಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡು ಬಂತು. ನಾವು ಆತನ ಹತ್ತಿರಕ್ಕೆ ಹೋದಾಗ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಪ್ಲಾಸ್ಟಿಕ್ ಚೀಲವನ್ನು ಅಲ್ಲಿಯೇ ಬಿಟ್ಟು ಓಡಿ ಹೋದನು. ಹಿಡಿಯಲು ಪ್ರಯತ್ನಿಸಿದರು ಸಿಗಲಿಲ್ಲ. ನಂತರ ಪಂಚರಿಗೆ ಓಡಿ ಹೋದ ವ್ಯಕ್ತಿಯ ಹೆಸರು ವಿಳಾಸ ಕೇಳಲಾಗಿ ಮಹಂತೇಶ ತಂದೆ ರಂಗಪ್ಪ, ದೇವಪುರ ಗ್ರಾಮ ಎಂದು ತಿಳಿದುಬಂತು. ನಂತರ ಪಂಚರ ಸಮಕ್ಷಮ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್ ನ 48 ರಾಜಾ ವಿಸ್ಕಿ ಪೌಚ್ ಗಳು ದೊರೆತವು. ಸದರಿ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡು ರಾಸಾಯನಿಕ ಪರೀಕ್ಷೆಗಾಗಿ ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಹೊಲೆದು ಕೆ.ಎಸ್.ಪಿ ಎಂಬ ಇಲಾಖಾ ಮೊಹರು ಮಾಡಲಾಯಿತು. ಪಂಚನಾಮೆಯನ್ನು ಸಂಜೆ 5-15 ರಿಂದ 06-20 ರವರೆಗೆ ಜರುಗಿಸಲಾಯಿತು. ನಾನು ಪಂಚನಾಮೆಗೆ ಸಹಿ ಮಾಡಿರುವುದಿಲ್ಲ. ನಾನು ತನಿಖಾಧಿಕಾರಿಗಳಿಗೆ ನನ್ನ ಹೇಳಿಕೆ ನೀಡಿರುತ್ತೇನೆ.

ಆ ದಿನ ನಮ್ಮನ್ನು ನೋಡಿ ಓಡಿಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಆರೋಪಿ. ರಾಸಾಯನಿಕ ಪರೀಕ್ಷೆಗಾಗಿ ಮಾದರಿಗೆ ತೆಗೆದ **48** ರಾಜಾ ವಿಸ್ಕಿಯ ಪೌಚ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು**,** ಅವುಗಳನ್ನು ಈಗಾಗಲೇ ಒಟ್ಟಾಗಿ ಮು**.**ಮಾ**-1** ಎಂದು ಗುರುತಿಸಲಾಗಿದೆ**.**

## ಪಾಟೀ ಸವಾಲು **1** ನೇ ಆರೋಪಿ ಪರ ಶ್ರೀಮತಿ ಹೆಚ್.ಎಸ್.ಆರ್ ಆರೋಪಿ ಪರ ವಕೀಲರಿಂದಃ

ನಾವು ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಪಂಚರಿಗೆ ಯಾವುದೇ ನೋಟೀಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ದಾಳಿಗೆ ಹೋದಾಗ ಆರೋಪಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ದಿಃ 02-09-2022 ರಂದು ನಮಗೆ ಯಾವುದೇ ಬಾತ್ಮಿ ಬಂದಿರುವುದಿಲ್ಲ ಮತ್ತು ನಾವು ಯಾವುದೇ ಅಬಕಾರಿ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಂತೆ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಡಿಯಲ್ಲಿ ಮುದ್ದೆ ಮಾಲನ್ನು ಅಮಾನತ್ತುಪಡಿಸಿಕೊಂಡಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯ ತಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-1 ರಿಂದ 7 ರ ದಾಖಲೆಗಳನ್ನು ಠಾಣೆಯಲ್ಲೇ ಸೃಷ್ಠಿಸಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ ಗೂ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು **2** ನೇ ಆರೋಪಿ ಪರ ಶ್ರೀಮತಿ ಎಲ್.ಎಂ.ಹೆಚ್ ಆರೋಪಿ ಪರ ವಕೀಲರಿಂದಃ</u>

2 ನೇ ಆರೋಪಿ MSIL ಅಂಗಡಿಯಲ್ಲಿ ಕೆಲಸ ಮಾಡುವ ಕಾರಣ ಅವರು ಅಕ್ರಮಾಗಿ ಮದ್ಯ ಮಾರಾಟ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ.

**(** **1** ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು **2** ನೇ ಆರೋಪಿ ಪರ ವಕೀಲರು ಅವಳಡಿಸಿಕೊಂಡಿರುತ್ತಾರೆ**).**

ಮರುವಿಚಾರಣೆ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**
ಓ**.**ಹೇ**.**ಕೆ**.**ಸರಿ ಅದೆ**.**

ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ**.**ದ**.**ನ್ಯಾ**.**ದಂಡಾಧಿಕಾರಿಗಳು**,**
ಹೊಸದುರ್ಗ**.**